ಇ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗ ಇರುವ ಕಂಪನಿಯ ಘಟಕಗಳಲ್ಲದೇ ಇನ್ನು ಕೆಲವು ಘಟಕಗಳನ್ನು ಪ್ರಾರಂಭಿಸುವ ಉದ್ದೇಶ ಇರುವುದರಿಂದ ಕಂಪನಿಯ ನೋಂದಾಯಿತ ಕಛೇರಿಯನ್ನು ಬೆಂಗಳೂರಿನಿಂದ ರಾಯಚೂರಿಗೆ ಬದಲಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಜವಳಿ ನಗರ ಸ್ಥಾಪಿಸುವುದರ ಬಗ್ಗೆ

2063 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ "ಜವಳಿ ನಗರ" ಸ್ಥಾಪಿಸುವ ವಿಷಯವು ಸರ್ಕಾರದ ಯಾವ ಹಂತದಲ್ಲಿದೆ, ಹಾಗೂ ಅದನ್ನು ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಪಿ.ಸಿ. ಸಿದ್ಧನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ ನಗರದ ಬಳಿ ಜವಳಿ ನಗರ ಸ್ಥಾಪನೆಗಾಗಿ ಸರ್ಕಾರವು ಕ್ರಮ ಪ್ರಾರಂಭಿಸಿದೆ. ಈ ವರ್ಷದ ಅಯುವ್ಯದಲ್ಲಿ ಇದಕ್ಕಾಗಿ ರೂ. 20 ಲಕ್ಷಗಳನ್ನು ಒದಗಿಸಲಾಗಿದೆ. ಜವಳಿ ನಗರದ ಸ್ಥಾಪನೆಗಾಗಿ ಅವಶ್ಯವಿರುವ ಭೂಮಿಯನ್ನು ಒದಗಿಸುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದೆ ಹಾಗೂ ಜವಳಿ ನಗರ ಸ್ಥಾಪನೆಗಾಗಿ ಕೇಂದ್ರ ಸರ್ಕಾರವನ್ನು ರೂ. 500 ಲಕ್ಷಗಳ ಹಣಕಾಸಿನ ಸಹಾಯವನ್ನು ಒದಗಿಸುವಂತೆ ಕೋರಲಾಗಿದೆ. ಜಮೀನು ಜವಳಿ ಮತ್ತು ಕೈಮಗ್ಗ ಇಲಾಖೆಯವಶಕ್ಕೆ ಕೂಡಲೇ ನಿರ್ಮಾಣ ಕಾರ್ಯ ಆರಂಭಿಸಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದ ರಸ್ತೆ ಸುಧಾರಣೆ

2066 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ರಸ್ತೆ ಸುಧಾರಣೆಗಾಗಿ ದಿನಾಂಕ 1.4.1995 ರಿಂದ ಇಲ್ಲಿಯ ವರೆಗೆ ಮಹಾನಗರಸಭೆ ಖರ್ಚು ಮಾಡಿದ ಹಣವೆಷ್ಟು? ಯಾವ ಯಾವ ರಸ್ತೆಗಳನ್ನು ಸುಧಾರಣೆ ಮಾಡಲಾಗಿದೆ, ಇವುಗಳ ವಿವರ ಒದಗಿಸುವುದು.

ಶ್ರೀ ಪೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಮತ್ತು ಹೈದ್ರಾಬಾದ್- ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ರಸ್ತೆ ಸುಧಾರಣೆಗಾಗಿ ದಿನಾಂಕ 1.4.1995 ರಿಂದ ಇಲ್ಲಿಯ ವರೆಗೆ ರೂ. 22,20,791.00 ಖರ್ಚು ಮಾಡಲಾಗಿದೆ. ಸುಧಾರಿಸಲಾದ ಈ ರಸ್ತೆಗಳ ವಿವರಗಳನ್ನು ಲಗತ್ತಿಸಲಾಗಿದೆ.